ಯೋಜನೆಗಳಿಗೆ ಅನುದಾನ ಬಿಡುಗಡೆ

2431(2234): ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) ಕಳೆದ ಮೂರು ವರ್ಷಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಜಿಲ್ಲಾವಾರು ಯಾವ ಯಾವ ಯೋಜನೆಗಳಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ; ದಿನಾಂಕ: 31-01-2014 ರೊಳಗಾಗಿ ಖರ್ಚು ಮಾಡಲಾದ ಹಣ ಎಷ್ಟು;

ಆ) ಹಾವೇರಿ ಜಿಲ್ಲೆಯಲ್ಲಿ ಯಾವ ಯಾವ ಯೋಜನೆಗಳಿಗೆ ಎಷ್ಟು ಹಣ ಖರ್ಚು ಮಾಡಲಾಗಿದೆ. (ಕಾಲ್ಲೂಪಾಲು ಪ್ರಶ್ನೆ ಬದಲಿಸುವುದು)

ಶ್ರೀಮತಿ ಉಮಾಶ್ರೀ (ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಕಳೆದ ಮೂರು ವರ್ಷಗಳಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಈ ಕೆಳಕಂಡ ಯೋಜನೆಗಳಿಗೆ ಹಣ ಬಿಡುಗಡೆ ಮಾಡಲಾಗಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧಗಳಲ್ಲಿ ವಿವರಿಸಿದೆ.

1. ಜಯಂತಿ, ಉತ್ಸವಗಳು (ಅನುಬಂಧ-1)
2. ಜ್ಞಾನಪೀಠ, ಜ್ಞಾತ್ರೆ, ಸುಗ್ಗಿ-ಹುಗ್ಗಿ, ಕಾಲೇಜು ರಂಗೋತ್ಸವ (ಅನುಬಂಧ-2)
3. ಪ್ರಕಟಿತ ಗ್ರಂಥಗಳಿಗೆ ಧನಸಹಾಯ, ಎಂ.ಫಿಲ್, ಪ್ರಬಂಧದ ಹಸ್ತಪ್ರತಿ ಮುದ್ರಣಕ್ಕೆ ಧನಸಹಾಯ ಮತ್ತು ಪಿಹೆಚ್‌ಡಿ ಪ್ರಬಂಧದ ಹಸ್ತಪ್ರತಿ ಮುದ್ರಣಕ್ಕೆ ಧನಸಹಾಯ ಯೋಜನೆ. (ಅನುಬಂಧ-3)
4. ಕನ್ನಡ ಅಭಿವೃದ್ಧಿ ಯೋಜನೆ (ಅನುಬಂಧ-4)
5. ಪಾಷಾವ್ಯ ಯೋಜನೆಯಡಿ ಸಂಘ-ಸಂಸ್ಥೆಗಳು/ಕಲಾವಿದರಿಗೆ ಧನಸಹಾಯ (ಅನುಬಂಧ-5)

6. ವಿಶೇಷ ಘಟಕ ಯೋಜನೆಯಡಿ ಸಂಘ–ಸಂಸ್ಥೆಗಳಿಗೆ ಧನಸಹಾಯ, ವಾದ್ಯಪರಿಕರ, ವೇಷಭೂಷಣ ಖರೀದಿಗೆ ಧನಸಹಾಯ, ಅಂಬೇಡ್ಕರ್ ಪರಿನಿರ್ವಾಣ, ಗುರು–ಶಿಷ್ಯ ಪರಂಪರೆ ಯೋಜನೆ (ಅನುಬಂಧ–6)
7. ಸಾಂಸ್ಕೃತಿಕ ಭವನ, ಬಯಲು ರಂಗಮಂದಿರ ಜಿಲ್ಲಾ ರಂಗಮಂದಿರಗಳ ನಿರ್ಮಾಣ ಧನಸಹಾಯ. (ಅನುಬಂಧ–7)
8. ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರಾಯೋಜನ (ಚಿಗುರು, ಯುವಸೌರಭ, ಸಾಂಸ್ಕೃತಿಕ ಸೌರಭ ರಂಗಸುಗ್ಗಿ) (ಅನುಬಂಧ–8)

ಆ) ಮೇಲ್ಕಂಡ ಯೋಜನೆಗಳಲ್ಲಿ ಹಾವೇರಿ ಜಿಲ್ಲೆಗೂ ಹಣ ಬಿಡುಗಡೆ ಮಾಡಲಾಗಿದ್ದು, ಸದರಿ ಅನುಬಂಧಗಳಲ್ಲಿ ವೆಚ್ಚದ ಮಾಹಿತಿ ನೀಡಿದೆ.

ಅಕ್ಷರ ದಾಸೋಹ ಕೊಠಡಿಗಳು

2432(2235); ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) ರಾಜ್ಯದಲ್ಲಿ 2014–15ನೇ ಸಾಲಿನಲ್ಲಿ ತಾಲ್ಲೂಕುವಾರು ಕಟ್ಟಲು ಉದ್ದೇಶಿಸಿರುವ ಅಕ್ಷರ ದಾಸೋಹ ಕೊಠಡಿಗಳು ಸಂಖ್ಯೆ ಎಷ್ಟು;

ಆ) ಹಿರೇಕೆರೂರು ತಾಲ್ಲೂಕಿನ ಯಾವ ಯಾವ ಗ್ರಾಮಗಳಲ್ಲಿ ಅಕ್ಷರ ದಾಸೋಹ ಕೊಠಡಿಯ ಅವಶ್ಯಕತೆ ಇದೆ?

ಶ್ರೀ ಕಿಮ್ಮನೆ ರತ್ನಾಕರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ರಾಜ್ಯದಲ್ಲಿ 2014–15ನೇ ಸಾಲಿನಲ್ಲಿ ಜಿಲ್ಲಾವಾರು ಕಟ್ಟಲು ಉದ್ದೇಶಿಸಿರುವ ಅಕ್ಷರ ದಾಸೋಹ ಕೊಠಡಿಗಳ ಸಂಖ್ಯೆ 3153.

ಆ) ಹಿರೇಕೆರೂರು ತಾಲ್ಲೂಕಿನ ಗ್ರಾಮಗಳಲ್ಲಿ ಅವಶ್ಯಕವಿರುವ ಅಕ್ಷರ ದಾಸೋಹ ಕೊಠಡಿಯ ಶಾಲೆಗಳ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ.